


ವಾಗೀಶ ಹೆಗಡೆ

# ಅರಿವೆ

ಕಸೂತಿಯ ಅರಿವೆಯಿದು
ಗಿಳಿ ಹಸಿರು ಬಣ್ಣದಲಿ
ಎಲೆ ಬಳ್ಳಿ ಹೂ ಹಕ್ಕಿ

ತೆಳುವಾದ ಅರಿವೆಯಲಿ
ಕೆಂಗುಲಾಬಿಯ ನವಿರು
ಪದರ ಪದರದ ಹಿಂದೆ
ಸೂಜಿ ಚುಚ್ಚಿದ ಗುರುತು

ಒಂದೊಂದು ಹೆಣಿಗೆಗೂ
ಅರಿವೆಯ ಅರಿವು

ಪೋಣಿಸುವ ಮುತ್ತುಗಳು
ಕಾಡಿಸುವ ಸುಕ್ಕುಗಳು
ಕೆಡದೆ ಇರಬೇಕಲ್ಲ ಅರಿವೆ

ಅರಿವೆ ಹಳತಾದಂತೆ
ಕಳೆಯಿಲ್ಲ ನೆರಿಗೆಗಳು
ಬುರುಗು ನೊರೆ ನೀರಿನಲಿ ತೊಳೆವ ಪರಿವೆ

ಅರಿವೆಗೂ ಅರಿವಿಗೂ ಏನೋ ನಂಟು
ಅರಿವು ಕೆಡದಿರಲಿ ದೊರೆಯೇ

● ಜಯಶ್ರೀ ಬಿ. ಕದ್ರಿ